ಓ.ಎಸ್. ನಂ.*9/2014*

ಪಿ.ಡಬ್ಲು-೧

ಸಾಕ್ಷಿಯನ್ನು ಇಂದು ದಿನಾಂಕಃ *07.01.2023* ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎಸ್.ಎಸ್.ಸಿ. ವಕೀಲರಿಂದ**

ಈ ದಾವೆಯನ್ನು ಹೂಡುವ ಮೊದಲು ನಾನು ಇನ್ನೊಂದು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿ. ಸದರಿ ಈ ಮೊದಲು ಮಾಡಿದ ದಾವೆಗೆ ಮಾಡಲು ಮಾಹಿತಿಯನ್ನು ನಮ್ಮ ವಕೀಲರಿಗೆ ನಾನೇ ನೀಡಿದ್ದೇನೆ. ಸದರಿ ದಾವೆಯಲ್ಲಿ ನೀವು ಇಬ್ಬರೇ ಅಕ್ಕ ತಂಗಿಯರು ಎಂದು ತೋರಿಸಿದ್ದು ನಿಜನಾ ಎಂದರೆ ಸರಿಯಲ್ಲ, ಸಾಕ್ಷಿಯು ಮೂರು ಜನರು ಎಂದು ನುಡಿಯುತ್ತಾರೆ. ಸದರಿ ಮೊದಲಿನ ದಾವೆಯಲ್ಲಿ ಗಣಪತಿ ಅನ್ನುವವರು 12 ವರ್ಷಕ್ಕಿಂತ ಮೊದಲು ಪಾಲು ವಾಟ್ನಿ ಮಾಡಿಕೊಟ್ಟಿರುತ್ತಾರೆ ಎಂದು ಹೇಳಿದ್ದೀರಾ ಅದು ನಿಜಾನಾ ಅಥವಾ ಸುಳ್ಳಾ ಎಂದರೆ ಸಾಕ್ಷಿಯು ನಿಜ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ಗಣಪತಿ ಅನ್ನುವವರು ಮೃತ್ಯು ಪತ್ರದ ಪ್ರಕಾರ ನಮಗೆ ಪಾಲು

ವಾಟ್ನಿ ಮಾಡಿಕೊಟ್ಟಿರುತ್ತಾರೆ ಎಂದು ಹೇಳಿರುತ್ತೇವೆ ಎಂದರೆ ಸರಿ. ಸದರಿ ಮೃತ್ಯು ಪತ್ರವನ್ನು ಈ ದಾವೆಯಲ್ಲಿ ಹಾಜರುಪಡಿಸಿರುತ್ತೀರಾ ಎಂಧರೆ ಹಾಜರುಪಡಿಸಿರುತ್ತೇವೆ ಎಂದು ನುಡಿಯುತ್ತಾರೆ.

ದಾವೆ ಮಾಡುವ ಕಾಲಕ್ಕೆ ಪ್ರತಿವಾದಿ ನಂ.೧ ಜೀವಂತ ಇದ್ದರಾ ಅಥವಾ ಮೃತರಾಗಿದ್ದರಾ ಎಂದರೆ ಸಾಕ್ಷಿಯು ಮೃತರಾಗಿದ್ದರು ಎಂದು ನುಡಿಯುತ್ತಾರೆ. ಸದರಿ ಮೃತ್ಯು ಪತ್ರದಲ್ಲಿ ಪ್ರತಿವಾದಿ ನಂ.೩ ರವರಿಗೆ ದಾವಾ ಆಸ್ತಿಯಲ್ಲಿ ಎಷ್ಟು ಪಾಲು ಕೊಟ್ಟಿದ್ದೀರಾ ಎಂದರೆ, ಸಾಕ್ಷಿಯು ಪ್ರತಿವಾದಿ ನಂ.೩ ರವರ ಹೆಸರನ್ನು ಸೇರಿಸಬೇಕಿದೆ ಆದ್ದರಿಂದ ಈ ದಾವೆಯನ್ನು ಹೂಡಿರುತ್ತೇವೆ ಎಂದು ನುಡಿಯುತ್ತಾರೆ. ಮೊದಲು ನಾವು ಓ.ಎಸ್. ನಂ. 218/2013 ನ್ನು ಪ್ರತಿವಾದಿ ನಂ.೨(ಎ) ಮತ್ತು ೨(ಬಿ) ರವರ ವಿರುದ್ದ ದಾಖಲಿಸಿದ್ದೆವು ಎಂದರೆ ಸರಿ, ಸಾಕ್ಷಿ ಮುಂದುವರೆದು ಅದು ತಪ್ಪಾದ ಕಾರಣ ಈ ದಾವೆಯನ್ನು ಹೂಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಓ.ಎಸ್. ನಂ. 218/2013 ರಲ್ಲಿ ಸದರಿ ಪ್ರತಿವಾದಿ ನಂ.೧ ಮೃತರಾಗಿರುತ್ತಾರೆ ಎಂದು ಬರೆಸಿರುತ್ತೇವೆ ಎಂಧರೆ ಸರಿ. ಈ ದಾವೆಯಲ್ಲಿ ಪ್ರತಿವಾದಿ ನಂ.೧ ರವರ ವಿರುದ್ದ ಎಲ್ಲಿ ಹೋಗಿದ್ದಾರೆ ಎಂದು ಗೊತ್ತಿಲ್ಲ ಎಂದು ಹೇಳಿ ದಾವೆ ಹೂಡಿರುತ್ತೇವೆ ಎಂಧರೆ ಸರಿ. ಓ.ಎಸ್. ನಂ. 218/2013 ರಲ್ಲಿ ನಮಗೆ ಮೂರನೇ ತಂಗಿ ಇದ್ದಾಳೆ ಎಂದು ನಮೂದು ಮಾಡಿರುವುದಿಲ್ಲ ಎಂಧರೆ ಸರಿ ಅಲ್ಲ. ಓ.ಎಸ್. ನಂ. 218/2013 ಮತ್ತು ಈ ದಾವೆಯಲ್ಲೂ ಪ್ರತಿವಾದಿ ನಂ.೧ ರವರಿಗೆ ಎಷ್ಟು ಪಾಲು ಬರಬೇಕು ಎಂದು ನಮೂದಿಸಿಲ್ಲ ಎಂದರೆ ಸರಿ ಅಲ್ಲ. ಪ್ರತಿವಾದಿ ನಂ.೨ ರವರಿಗೆ ಎಷ್ಟು ಪಾಲು ಕೊಟ್ಟಿದ್ದಾರೆ ಎಂದು ಓ.ಎಸ್. ನಂ. 218/2013 ರಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ ಅಲ್ಲ.

ನನ್ನ ತಾಯಿ ಪ್ರತಿವಾದಿ ನಂ.೧ ನನ್ನ ತಂದೆಯ ಮೊದಲನೇ ಹೆಂಡತಿ ಎಂದು ನನ್ನ ತಂದೆಯವರು ನನಗೆ ಹೇಳಿರುತ್ತಾರೆ. ನಿಮ್ಮ ತಂದೆಯವರು ನಿಮ್ಮ ತಾಯಿಯ ಜೊತೆ ಯಾವ ವರ್ಷ, ಯಾವ ತಿಂಗಳು ಯಾವ ತಾರೀಖಿನಂದು ಎಲ್ಲಿ ಮದುವೆ ಆಗಿರುತ್ತಾರೆ ಎಂದು ಹೇಳಿರುತ್ತಾರಾ ಎಂದರೆ ಸಾಕ್ಷಿಯು ಜಮಗಾ ಗ್ರಾಮದಲ್ಲಿ ಆಗಿರುತ್ತದೆ, ಯಾವ ವರ್ಷ, ತಿಂಗಳು ತಾರೀಖು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಮದುವೆ ಆದ ಲಗ್ನ ಪತ್ರಿಕೆ ಏನಾದರೂ ಇದೆಯಾ ಎಂಧರೆ, ಸಾಕ್ಷಿಯು ಲಗ್ನ ಪತ್ರಿಕೆ ಆಗಿದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ ಎಂದು

ನುಡಿಯುತ್ತಾರೆ. ನಿಮ್ಮ ತಾಯಿಯ ಜೊತೆ ತಂದೆಯ ಮದುವೆ ಆಗಿರುತ್ತದೆ ಎಂದು ಹೇಳುತ್ತಿರಲ್ಲಾ ಆ ಸಮಯದಲ್ಲಿ ಯಾರು ಯಾರು ಇದ್ದರು, ಯಾರು ತಾಳಿ ಕಟ್ಟಿದರು, ಯಾರು ಮಂತ್ರ ಹೇಳಿದರು. ಎಂದು ನಿಮಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿಯು ನಮ್ಮ ಸೋದರ ಮಾವ ಇದ್ದರು ಅವರು ತೀರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನನಗೆ ನಾಲ್ಕು ಜನ ಸೋದರ ಮಾವಂದಿರು ಇದ್ದರು, ಎಲ್ಲರೂ ಕರೋನಾ ಸಮಯದಲ್ಲಿ ತೀರಿಕೊಂಡಿರುತ್ತಾರೆ. ೧) ಶಿವಶರಣಪ್ಪ ಹರಸೂರೆ ೨) ಶಿವರಾಜ ಹರಸೂರೆ, ೩) ರಾಜು ಹರಸೂರೆ, ೪) ನಾಗೇಂದ್ರ ಹರಸೂರೆ ಅಂತಾ ನನಗೆ ಸೋದರ ಮಾವಂದಿರು ಇದ್ದರು. ಈ ದಾವೆಯನ್ನು ಹೂಡಿದಾಗ ನನ್ನ ಮಾವ ಶಿವರಾಜ ಜೀವಂತ ಇದ್ದರು. ಈಗ ತೀರಿಕೊಂಡಿರುತ್ತಾರೆ. ಈಗ ತೀರಿಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂಥರೆ ಸರಿ ಅಲ್ಲ, ಸದರಿ ಶಿವರಾಜ ಮಾಸ್ತರ ಈಗ ಪುನಾದಲ್ಲಿ ಅವರ ಮಕ್ಕಳ ಜೊತೆ ವಾಸಿಸುತ್ತಿದ್ದಾರೆ ಎಂಥರೆ ಸರಿ ಅಲ್ಲ. ಅವರು ತೀರಕೊಂಡಿದ್ದಾರೆ ಎಂದು ಅವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೀರಾ ಎಂಥರೆ ಸಾಕ್ಷಿಯು ಅವಶ್ಯಕತೆ ಇದ್ದರೆ ತಂದು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ.

ಈ ದಾವೆಯಲ್ಲಿ ನಿಮ್ಮ ತಾಯಿಯವರು ಗಣಪತಿ ಅವರ ಜೊತೆ ವಾಸಿಸುತ್ತಿದ್ದರು ಎಂದು ತೋರಿಸಲು ಚುನಾವಣಾ ಗುರುತಿನ ಚೀಟಿಯನ್ನು ಏನಾದರೂ ಹಾಜರುಪಡಿಸಿದ್ದೀರಾ ಎಂಥರೆ ಸಾಕ್ಷಿಯು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಗಣಪತಿರಾವ ಧುತ್ತರಗಿ ರವರು ನಮ್ಮ ತಾಯಿಯ ಜೊತೆ ಯಾವಾಗಲೂ ಮದುವೆ ಆಗಿರುವುದಿಲ್ಲ ಎಂದರೆ ಸರಿ ಅಲ್ಲ. ಪ್ರತಿವಾದಿ ನಂ.೧ ಮೊದಲು ಬೇರೆಯವರ ಜೊತೆ ಮದುವೆ ಮಾಡಿಕೊಂಡು ನಂತರ ಗಣಪತಿಯವರು ಜೊತೆ ಮದುವೆ ಆಗದೆ ಅನೈತಿಕ ಸಂಬಂಧವನ್ನು ಹೊಂದಿರುತ್ತಾರೆ ಎಂದರೆ ಸರಿ ಅಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ನನ್ನ ತಾಯಿಯ ಮದುವೆಯು ಗಣಪತಿರವರ ಜೊತೆ ವಿದಿವತ್ತಾಗಿ ಆಗಿರುತ್ತದೆ ಎಂದು ಬರೆಸಿರುವ ವಿಷಯ ಸುಳ್ಳು ಎಂದರೆ ಸರಿ ಅಲ್ಲ. ಪುತಳಾಬಾಯಿಯವರು ಗಣಪತಿರಾವ ಧುತ್ತರಗಿರವರ ಜೊತೆ ವಿದಿವತ್ತಾಗಿ ಮದುವೆ ಆಗಿರುವುದಿಲ್ಲ, ಅವರು ಗಣಪತಿರಾವ ಜೊತೆ ಅನೈತಿಕ ಸಂಬಂಧವನ್ನು ಹೊಂದಿದ್ದರು ಎಂಥರೆ ಸರಿ ಅಲ್ಲ. ನಾವು ನಮ್ಮ ದಾವೆಯಲ್ಲಿ ಪ್ರತಿವಾದಿ ನಂ.೧, 2011 ರ ಮೊದಲೇ ಮನೆ ಬಿಟ್ಟು ಹೋಗಿರುತ್ತಾರೆ ಎಂದು ಬರೆಸಿರುತ್ತೇವೆ ಎಂಥರೆ ಸರಿ.

ಶಾಂತಾಬಾಯಿ ಯಕ್ಕುಂಡೆರವರನ್ನು ಹೊರಗಿನಿಂದ ಗಣಪತಿರಾವ ತೆಗೆದುಕೊಂಡು ಬಂದರು ಎಂದು ಹೇಳುತ್ತೀರಲ್ಲಾ ಯಾವಾಗ, ಎಲ್ಲಿಂದ ಯಾವ ವರ್ಷ ತೆಗೆದುಕೊಂಡು ಬಂದರು ಎಂದು ಹೇಳಲು ಬರುತ್ತದೆಯಾ ಎಂಧರೆ ಸಾಕ್ಷಿ ನನಗೆ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಈ ದಾವೆಗೆ ಮಾಹಿತಿ ಕೊಡುವ ಸಮಯದಲ್ಲಿ ನನ್ನ ತಾಯಿ ಗಣಪತಿರಾವ ರವರ ಮನೆಯಲ್ಲಿ ಇರಲಿಲ್ಲ. ನಿಮ್ಮ ತಾಯಿ ಗಣಪತಿರಾವ ದುತ್ತರಗಿ ರವರ ಹೆಂಡತಿ ಎಂದು ತೋರಿಸಲು ನೀವೇನಾದರೂ ರೇಷನ ಕಾರ್ಡ, ಆದಾರ ಕಾರ್ಡ, ಇನ್ನಿತರವಾದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ವಂಶಾವಳಿಯನ್ನು ಮತ್ತು ದಾಖಲಾತಿಗಳನ್ನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ನಿಮ್ಮ ತಾಯಿ ಮೊದಲನೇ ಹೆಂಡತಿ ಎಂದು ತೋರಿಸಲು ರೇಷನ ಕಾರ್ಡ, ಆದಾರ ಕಾರ್ಡ, ಚುನಾವಣಾ ಗುರುತಿನ ಚೀಟಿ ಇನ್ನಿತರವಾದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ ಅಲ್ಲ. ಪ್ರತಿವಾದಿ ನಂ.೨ ರವರು ಗಣಪತಿರಾವ ಧುತ್ತರಗಿ ರವರ ಕಾನುನುಬದ್ದ ಹೆಂಡತಿ ಇರುತ್ತಾರೆ ಎಂದರೆ ಸರಿ ಅಲ್ಲ. ನಿಮ್ಮ ತಾಯಿ ಗಣಪತಿರಾವರ ಮೊದಲನೇ ಹೆಂಡತಿ ಎಂದು ತೋರಿಸಲು ಆದಾರ ಕಾರ್ಡ, ರೇಷನ್ ಕಾರ್ಡ ಚುನಾವಣ ಗುರುತಿನ ಚೀಟಿ ಮತ್ತು ಇನ್ನಿತರವಾದ ಯಾವುದೇ ದಾಖಲಾತಿಗಳು ಸಿಗದ ಕಾರಣ ನಿಪಿ-೪ನ್ನು ಖೊಟ್ಟಿಯಾಗಿ 2007 ರಲ್ಲಿ ಸೃಷ್ಟಿಸಿರುತ್ತೇವೆ ಎಂಧರೆ ಸರಿ ಅಲ್ಲ. ಸರಕಾರದವರು ಓ.ಎ.ಪಿ. ಯನ್ನು ಯಾರಿಗೆ ಜಮೀನುಗಳು ಇರುವುದಿಲ್ಲ, ಯಾರಿಗೆ ವಯಸ್ಸಾಗಿರುತ್ತದೆ ಅವರಿಗೆ ದುಡಿಯಲು ಶಕ್ತಿ ಇಲ್ಲ, ಇನ್ನಿತರ ಆಸ್ತಿಗಳು ಇಲ್ಲದವರಿಗೆ ಓ.ಎ.ಪಿ. ಯನ್ನು ಕೊಡುತ್ತಾರೆ ಎಂಧರೆ ಸರಿ ಅಲ್ಲ. ನಿಪಿ-೪ರಲ್ಲಿ ಗಣಪತಿರಾವ ಧುತ್ತರಗಿ ಎಂದು ಬರೆದಿರುವುದಿಲ್ಲ ಎಂದರೆ ಸರಿ ಅಲ್ಲ.

ನನಗೆ ಓದಲು ಬರೆಯಲು ಬರುವುದಿಲ್ಲ. ಈ ದಾವೆಗೋಸ್ಕರ ಖೊಟ್ಟಿಯಾಗಿ ನಿಪಿ-49 ಮತ್ತು ನಿಪಿ-52 ನ್ನು ಹಿಂದಿನ ದಿನಾಂಕವನ್ನು ಹಾಕಿ ಸೃಷ್ಟಿಸಿರುತ್ತೇವೆ ಎಂಧರೆ ಸರಿ ಅಲ್ಲ. ಮೇಲಾಧಿಕಾರಿಗಳೊಂದಿಗೆ ಮಿಲಾಪಿಯಾಗಿ ನಿಪಿ49 ಮತ್ತು 52 ನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿ ಅಲ್ಲ. ನನ್ನ ತಾಯಿಯ ರವಾಸಿ ಪ್ರಮಾಣ ಪತ್ರವನ್ನು ಪಡೆಯಲು ಅರ್ಜಿಯನ್ನು ನೀಡಿ ಪಡೆದುಕೊಂಡಿರುತ್ತೇನೆ. ಈ ದಾವೆಯನ್ನು ಹೂಡಲು ಅರ್ಜಿಯನ್ನು ನೀಡಿ ಪಡೆದುಕೊಂಡಿರುತ್ತೇನೆ ಎಂಧರೆ, ಸಾಕ್ಷಿಯು ಈ ದಾವೆಯನ್ನು ಹೂಡಿದ ನಂತರ ಪಡೆದುಕೊಂಡಿರುತ್ತೇನೆ ಎಂದು

ನುಡಿಯುತ್ತಾರೆ. ಪಂಚಾಯತಿಯವರಿಗೆ ಅರ್ಜಿಯನ್ನು ನೀಡಿ ರವಾಸಿ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ ಎಂದು ಹೇಳುತ್ತೀರಲ್ಲಾ, ಅದಕ್ಕೆ ನೀಡಿದ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂಧರೆ ಸಾಕ್ಷಿಯು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಹಿರಿಯ ನಾಗರೀಕರ ಪ್ರಮಾಣ ಪತ್ರವನ್ನು ಪಡೆಯಲು ಅರ್ಜಿಯನ್ನು ನೀಡಿದ್ದೀರಾ ಎಂಧರೆ ಸಾಕ್ಷಿಯು ನನ್ನ ಸೋದರ ಮಾವನು ನಿಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಹೂಡುವ ಸಮಯದಲ್ಲಿ ನಿಪಿ-49 ಮತ್ತು 52 ನ್ನು ನೀಡಿರುವುದಿಲ್ಲ ಎಂದರೆ ಸರಿ ಅಲ್ಲ.

*[ ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು ]*

ಓ.ಹೇ.ಕೆ.ಸರಿ.ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಆಳಂದ.